ಸ್ಥಾಪನೆ : 2000

ದೂ. : 22865939 /22865937/29701228
ಸಿಟಿ ಸಿವಿಲ್ ಶಾಖೆ : 22217077,
ಮ್ಯಾಜಿಸ್ಟ್ರೇಟ್ ಕೋರ್ಟ್ ಶಾಖೆ: 29703399

ನ್ಯಾಯಮಿತ್ರ ಸಹಕಾರಿ ಬ್ಯಾಂಕ್ ನಿಯಮಿತ

ರಾಜ್ಯ ಉಚ್ಚನ್ಯಾಯಾಲಯದ ಕಟ್ಟಡ, (ಹೊಸ ಸಂಕೀರ್ಣ)
ಡಾ:ಅಂಬೇಡ್ಕರ್ ವೀಧಿ, ಬೆಂಗಳೂರು-560 001.
(ಜೆಆರ್‌ಬಿ:ನೋಂದಣಿ 97:12:26148:98-99 ದಿನಾಂಕ 15.02.1999)

2025-2026 ನೇ ಸಾಲಿನ ವಾರ್ಷಿಕ ಸರ್ವಸದಸ್ಯರ ಸಭೆಯ ನೋಟೀಸು

ನ್ಯಾಯಮಿತ್ರ ಸಹಕಾರಿ ಬ್ಯಾಂಕ್ ನಿಯಮಿತ, ಬೆಂಗಳೂರು-560 001 ಇದರ 2025-2026ನೇ ಸಾಲಿನ ವಾರ್ಷಿಕ ಸರ್ವಸದಸ್ಯರ ಸಭೆಯನ್ನು ದಿನಾಂಕ 06.09.2026 ನೇ ಭಾನುವಾರ ಬೆಳಗ್ಗೆ 10.00 ಗಂಟೆಗೆ, ವಕೀಲರ ಭವನ, ಸಿಟಿ ಸಿವಿಲ್ ನ್ಯಾಯಾಲಯದ ಆವರಣ, ಕೆಂಪೇಗೌಡ ರಸ್ತೆ, ಬೆಂಗಳೂರು-560009 ಇಲ್ಲಿ ಬ್ಯಾಂಕಿನ ಅಧ್ಯಕ್ಷರಾದ **ಶ್ರೀ ಶ್ರೀನಿವಾಸ.ಎಸ್.ಜಿ** ರವರ ಅಧ್ಯಕ್ಷತೆಯಲ್ಲಿ ಏರ್ಪಡಿಸಲಾಗಿದೆ.

ಮಾನ್ಯ ಸದಸ್ಯರೆಲ್ಲರೂ ವಾರ್ಷಿಕ ಸರ್ವಸದಸ್ಯರ ಸಭೆಗೆ ಸಕಾಲಕ್ಕೆ ಆಗಮಿಸಬೇಕಾಗಿ ಕೋರಲಾಗಿದೆ.

ಕಾರ್ಯಕ್ರಮ ಪಟ್ಟಿ

1. ಪ್ರಾರ್ಥನೆ.
2. ಸ್ವಾಗತ
3. ವರದಿ ಸಾಲಿನಲ್ಲಿ ಮರಣಹೊಂದಿದ ಸದಸ್ಯರಿಗೆ ಸಂತಾಪ ಸೂಚಿಸುವುದು.
4. 2025-2026ನೇ ಸಾಲಿನ ವಾರ್ಷಿಕ ಸರ್ವಸದಸ್ಯರ ಸಭೆಯ ನೋಟೀಸನ್ನು ಓದಿ ದಾಖಲು ಮಾಡುವುದು.
5. 2024-2025ನೇ ಸಾಲಿನ ಮಹಾಸಭೆಯ ನಡವಳಿಕೆಗಳನ್ನು ಓದಿ ದಾಖಲು ಮಾಡುವುದು.
6. 2025-2026ನೇ ಸಾಲಿನ ಆಡಳಿತ ವರದಿಯ ಮಂಡನೆ.
7. 2025-2026ನೇ ಸಾಲಿನಲ್ಲಿ ಎಸ್.ಎಸ್.ಎಲ್.ಸಿ ಮತ್ತು ದ್ವಿತೀಯ ಪಿ.ಯು.ಸಿಯಲ್ಲಿ ಶೇ.80 ಮತ್ತು ಅದಕ್ಕಿಂತ ಹೆಚ್ಚು ಅಂಕಗಳಿಸಿ ಉತ್ತೀರ್ಣರಾದ ಸದಸ್ಯರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ
8. 2025-2026ನೇ ಸಾಲಿನ ಖರ್ಚು ವೆಚ್ಚ, ಪರಿಶೋಧಿತ ಲೆಕ್ಕಪತ್ರ ಹಾಗೂ ಲೆಕ್ಕಪರಿಶೋಧನಾ ವರದಿ ಪರಿಶೀಲಿಸಿ ಅಂಗೀಕರಿಸುವುದು.
9. 2026-2027 ನೇ ಸಾಲಿಗೆ ಆಯ-ವ್ಯಯದ ಅಂದಾಜು(Budget) ಮುಂಗಡಪತ್ರ ಮಂಜೂರು ಮಾಡುವುದು.
10. 2025-2026ನೇ ಸಾಲಿನ ನಿವ್ವಳ ಲಾಭದ ವಿಲೇವಾರಿ ಅನುಮೋಧನೆ.
11. ಇತರೆ ವಿಷಯಗಳು ಇದ್ದಲ್ಲಿ ಅಧ್ಯಕ್ಷರ ಒಪ್ಪಿಗೆ ಮೇರೆಗೆ.
12. ವಂದನಾರ್ಪಣೆ.

ಆಡಳಿತ ಮಂಡಳಿಯ ಪರವಾಗಿ
ಸಹಿ/-
(ಪ್ರಸನ್ನ.ಡಿ.ಆರ್)
ಪ್ರಧಾನ ವ್ಯವಸ್ಥಾಪಕರು

ಸ್ಥಳ: ಬೆಂಗಳೂರು
ದಿನಾಂಕ: 30.07.2026.

ವಿಶೇಷ ಸೂಚನೆಗಳು

1. ಸರ್ವಸದಸ್ಯರ ಸಭೆಯಲ್ಲಿ ಯಾವುದೇ ವಿಷಯಗಳ ಬಗ್ಗೆ ಸದಸ್ಯರು ಸ್ಪಷ್ಟೀಕರಣ ಬಯಸಿದಲ್ಲಿ ಸಭೆಯ ದಿನಾಂಕಕ್ಕೆ 5 ದಿವಸಗಳ ಮುಂಚಿತವಾಗಿ ಬ್ಯಾಂಕಿಗೆ ಲಿಖಿತವಾಗಿ ತಿಳಿಸತಕ್ಕದ್ದು.

2. ಬ್ಯಾಂಕಿನಿಂದ ಷೇರು ಪತ್ರ, ಗುರುತಿನ ಚೀಟಿ ಪಡೆದುಕೊಳ್ಳದೆ ಇರುವ ಸದಸ್ಯರು ತಮ್ಮ ಇತ್ತೀಚಿನ ಎರಡು ಭಾವಚಿತ್ರಗಳನ್ನು ನೀಡಿ ಕೆಲಸದ ವೇಳೆಯಲ್ಲಿ ಪಡೆದುಕೊಳ್ಳಲು ವಿನಂತಿಸಲಾಗಿದೆ. ಬ್ಯಾಂಕಿನ ವ್ಯವಹಾರದ ವೇಳೆಯಲ್ಲಿ ಸ್ಮಾರ್ಟ್ ಕಾರ್ಡ್ ನೀಡುವ ಉದ್ದೇಶಕ್ಕಾಗಿ ತಮ್ಮ ಹೆಬ್ಬಟ್ಟಿನ ಗುರುತನ್ನು ನೀಡಬೇಕಾಗಿ ಕೋರಲಾಗಿದೆ.

3. ಕಾರ್ಯಕ್ರಮ ಪಟ್ಟಿಯ ವಿಷಯಗಳಿಗೆ ಸಂಬಂಧಿಸಿದಂತೆ ವರದಿ ಹಾಗೂ ಲೆಕ್ಕಪತ್ರಗಳನ್ನು ಸದಸ್ಯರು ಬ್ಯಾಂಕಿನ ಕೆಲಸದ ವೇಳೆಯಲ್ಲಿ ಪಡೆದುಕೊಳ್ಳಬೇಕೆಂದು ಕೋರಲಾಗಿದೆ.

4. ಹಿಂದಿನ ಸಾಲುಗಳಲ್ಲಿ ಘೋಷಿಸಿರುವ ಲಾಭಾಂಶವನ್ನು (ಡಿವಿಡೆಂಡ್) ಪಡೆದುಕೊಳ್ಳದೆ ಇರುವ ಮಾನ್ಯ ಸದಸ್ಯರು ಬ್ಯಾಂಕಿನ ವ್ಯವಹಾರದ ವೇಳೆಯಲ್ಲಿ ಪಡೆದುಕೊಳ್ಳಬೇಕೆಂದು ವಿನಂತಿಸಿಕೊಳ್ಳಲಾಗಿದೆ. ಬ್ಯಾಂಕಿನ ಉಪನಿಯಮಗಳಂತೆ ಡಿವಿಡೆಂಡ್‌ನ್ನು ಘೋಷಣೆ ಮಾಡಿದ ದಿನಾಂಕದಿಂದ ಮೂರು ವರ್ಷಗಳೊಳಗೆ ಸದಸ್ಯರು ಪಡೆದುಕೊಳ್ಳದೆ ಇದ್ದಲ್ಲಿ ಸದರಿ ಡಿವಿಡೆಂಡ್‌ನ್ನು ಬ್ಯಾಂಕಿನ ಕಾಯ್ದಿರಿಸಿದ ನಿಧಿಗೆ ಜಮಾ ಮಾಡಿಕೊಳ್ಳಲಾಗುವುದು. ಈ ಸಂಬಂದ ಪ್ರತ್ಯೇಕವಾಗಿ ಯಾವುದೇ ಸೂಚನೆಯನ್ನು ಕಳುಹಿಸಲಾಗುವುದಿಲ್ಲ.

5. ಭಾರತೀಯ ರಿಸರ್ವ್ ಬ್ಯಾಂಕಿನ ಆದೇಶದನ್ವಯ ಬ್ಯಾಂಕಿನಲ್ಲಿ "ನಿಮ್ಮ ಗ್ರಾಹಕರನ್ನು ಅರಿಯಿರಿ"(KYC Norms) ನೀತಿ ಅನ್ವಯ ಎಲ್ಲಾ ಗ್ರಾಹಕರು ತಮ್ಮ ವಿಳಾಸದ ದಾಖಲಾತಿಗಳಾದ ಚುನಾವಣಾ ಗುರುತಿನ ಚೀಟಿ, ಆಧಾರ್ ಕಾರ್ಡ್, ಪಾಸ್‌ಪೋರ್ಟ್, ವಾಹನ ಚಾಲನೆ ಅನುಮತಿ ಪತ್ರ, ನೌಕರರ ಗುರುತಿನ ಚೀಟಿ ಪಾನ್‌ಕಾರ್ಡ್ ಮತ್ತು ಇತರ ಅವಶ್ಯ ದಾಖಲೆಗಳನ್ನು ಕಡ್ಡಾಯವಾಗಿ ಸಲ್ಲಿಸಲು ಕೋರಲಾಗಿದೆ.

6. ಆದಾಯ ಕರ ಕಾನೂನು 1961 ನಿಯಮ 192ರ ಮೇರೆಗೆ ಬ್ಯಾಂಕಿನಲ್ಲಿ ವ್ಯವಹರಿಸುವುದಕ್ಕೆ ಹಾಗೂ ಠೇವಣಿ ಮಾಡುವುದಕ್ಕೆ ಪಾನ್ ಸಂಖ್ಯೆ ಕಡ್ಡಾಯವಿದ್ದು ಹಾಗೂ ಠೇವಣಿಗಳ ಮೇಲಿನ ಬಡ್ಡಿ ರೂ.40000/–ಮತ್ತು ರೂ.50000/– ಹಾಗೂ ಅದಕ್ಕಿಂತ ಹೆಚ್ಚಾದಲ್ಲಿ ಸಾಮಾನ್ಯ ನಾಗರೀಕರು 15G & ಹಿರಿಯ ನಾಗರೀಕರು 15H ಫಾರ್ಮ್‌ನ್ನು ಪಾನ್ ಕಾರ್ಡ್ ಸಂಖ್ಯೆಯೊಂದಿಗೆ ನೀಡಿದ್ದಲ್ಲಿ ಆದಾಯಕರ ವಿನಾಯಿತಿ ನೀಡಲಾಗುವುದು.

7. ಕಳೆದ 5 ಸಾಮಾನ್ಯ ಸಭೆಗಳ ಪೈಕಿ ಎರಡು ಸಾಮಾನ್ಯ ಸಭೆಗಳಿಗೆ ಹಾಜರಾಗಲು ತಪ್ಪುವ ಸದಸ್ಯರಿಗೆ ಹಾಗೂ ಐದು ನಿರಂತರ ಸಹಕಾರ ವರ್ಷಗಳಿಗೆ ಬ್ಯಾಂಕಿನ ಉಪವಿಧಿಗಳಲ್ಲಿ ಪ್ರತಿ ವರ್ಷದಲ್ಲಿ ಒಬ್ಬ ಸದಸ್ಯರು ಬಳಸಿಕೊಳ್ಳಲು ನಿರ್ದಿಷ್ಟಪಡಿಸಿದ ಕನಿಷ್ಟ ಸೇವೆಗಳನ್ನು ಅಥವಾ ಸೌಲಭ್ಯಗಳನ್ನು ಬಳಸಿಕೊಳ್ಳಲು ತಪ್ಪಿದ ಸದಸ್ಯರಿಗೆ ಚುನಾವಣೆಯಲ್ಲಿ ಮತ ಚಲಾಯಿಸುವ ಹಕ್ಕು ಇರುವುದಿಲ್ಲವಾದ ಕಾರಣ, ಸದಸ್ಯರು ತಪ್ಪದೆ ಸಾಮಾನ್ಯ ಸಭೆಗೆ ಹಾಜರಾಗುವುದು ಹಾಗೂ ಕನಿಷ್ಟ ಸೇವೆಗಳನ್ನು ಬಳಸಿಕೊಳ್ಳುವುದು.(ಕನಿಷ್ಟ ಸೇವೆಗಳಲ್ಲಿ ಬ್ಯಾಂಕಿನ ಯಾವುದೇ ಶಾಖೆಗಳಲ್ಲಾದರೂ ಉಳಿತಾಯ ಖಾತೆಯನ್ನು ಪ್ರಾರಂಭಿಸಬೇಕು)

8. ಮಾನ್ಯ ಸದಸ್ಯರಿಗೆ ಬೆಳಿಗ್ಗೆ 9.30 ಗಂಟೆಗೆ ಉಪಹಾರ ವ್ಯವಸ್ಥೆಯನ್ನು ಏರ್ಪಡಿಸಲಾಗಿದೆ.